# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೨೪, ಫೆಬ್ರವರಿ, ೨೦೨೩(ಫಾಲ್ಗುಣ, ೦೫, ಶಕವರ್ಷ, ೧೯೪೪)<br>BENGALURU, FRIDAY, 24, FEBRUARY, 2023(PHALGUNA, 05, SHAKAVARSHA, 1944) | ನಂ. ೭೯<br>No. 79 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನೈದನೇ ವಿಧಾನಸಭೆ**

**ಹದಿನೈದನೇ ಅಧಿವೇಶನ**

## ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–06)**

ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಉಪಬಂಧಗಳು 2023ರ ಏಪ್ರಿಲ್, 1ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-**ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 2ರಲ್ಲಿ,-

(i) ಖಂಡ (ಎ) ನಂತರ, ಈ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:-

"(ಎಎ) "ಏಜೆಂಟ್" ಎಂದರೆ, ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಲ್ಲಿ ಇನ್ನೊಬ್ಬ ವ್ಯಕ್ತಿಯ ಪರವಾಗಿ ಕಾರ್ಯನಿರ್ವಹಿಸುವ ಒಬ್ಬವ್ಯಕ್ತಿ;

(ಎಬಿ) ಈ ಅಧಿನಿಯಮದ ಉದ್ದೇಶಗಳಿಗಾಗಿ, "ಕರನಿರ್ಧರಣೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಬಾಧ್ಯತೆಯನ್ನು ನಿರ್ಧರಿಸುವುದು ಮತ್ತು ಸ್ವಯಂ-ಕರನಿರ್ಧರಣೆ, ಮರು-ಕರನಿರ್ಧರಣೆ ಮತ್ತು ಅತ್ಯುತ್ತಮ ವಿವೇಚನಾ ಕರನಿರ್ಧರಣೆಯನ್ನು ಒಳಗೊಳ್ಳುತ್ತದೆ;" ಮತ್ತು

(ii) ಖಂಡ (ಹೆಚ್)ರಲ್ಲಿ, ವಿವರಣೆಯಲ್ಲಿ, "ಪ್ರತಿಯೊಂದು" ಎಂಬ ಪದದ ತರುವಾಯ "ಮಾಲೀಕತ್ವದ ಘಟಕ" ಎಂಬುದನ್ನು ಸೇರಿಸತಕ್ಕದ್ದು.

3. **ಪ್ರಕರಣ 9ರ ತಿದ್ದುಪಡಿ.-**ಮೂಲ ಅಧಿನಿಯಮದ ಪ್ರಕರಣ 9ರ ಉಪ-ಪ್ರಕರಣ (2)ರಲ್ಲಿ, "ಒಂದೂವರೆಯಷ್ಟಕ್ಕೆ ಮೀರದ" ಎಂಬ ಪದಗಳ ಬದಲಾಗಿ, "ಶೇಕಡ ನೂರರಷ್ಟಕ್ಕೆ ಸಮನಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. **ಪ್ರಕರಣ 10ರ ತಿದ್ದುಪಡಿ.-**ಮೂಲ ಅಧಿನಿಯಮದ ಪ್ರಕರಣ 10ರ ಉಪ-ಪ್ರಕರಣ (6)ರಲ್ಲಿ, "2%" ಎಂಬ ಅಂಕಿ ಮತ್ತು ಚಿಹ್ನೆಯ ಬದಲಾಗಿ, "ಶೇಕಡಾ ಒಂದೂವರೆಯಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

5. **ಪ್ರಕರಣ 11ರ ತಿದ್ದುಪಡಿ.-**ಮೂಲ ಅಧಿನಿಯಮದ ಪ್ರಕರಣ11ರ ಉಪ-ಪ್ರಕರಣ (2)ರಲ್ಲಿ, "ಶೇಕಡಾ ಒಂದೂ ಕಾಲಷ್ಟು" ಎಂಬ ಪದಗಳ ಬದಲಾಗಿ, "ಶೇಕಡಾ ಒಂದೂವರೆಯಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

6. **ಪ್ರಕರಣ 12ರ ತಿದ್ದುಪಡಿ.-** ಮೂಲಅಧಿನಿಯಮದ ಪ್ರಕರಣ 12ರಲ್ಲಿ,-

(i) "ಯುಕ್ತ ಕಾರಣವಿಲ್ಲದೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) "ಶೇಕಡ ಐವತ್ತಕ್ಕೆ ಮೀರದ" ಎಂಬ ಪದಗಳ ಬದಲಾಗಿ, "ಶೇಕಡಾ ಹತ್ತರಷ್ಟಕ್ಕೆ ಸಮನಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

7. **ಅನುಸೂಚಿಯ ಪ್ರತಿಯೋಜನೆ.-** ಮೂಲ ಅಧಿನಿಯಮದಲ್ಲಿ, ಅದರ ಅನುಸೂಚಿ ಮತ್ತು ವಿವರಣೆ I ರಿಂದ Vರ ಬದಲಿಗೆ ಈ ಮುಂದಿನ ಅನುಸೂಚಿ ಮತ್ತು ವಿವರಣೆಗಳನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:-

**"ಅನುಸೂಚಿ**

**(ಪ್ರಕರಣ 3(2)ನ್ನು ನೋಡಿ)**

**ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆಯ ದರಗಳು**

| ಕ್ರಮ ಸಂಖ್ಯೆ | ವ್ಯಕ್ತಿಗಳ ವರ್ಗ | ತೆರಿಗೆಯ ದರ |
|---|---|---|
| **(1)** | **(2)** | **(3)** |
| 1 | ಒಂದು ತಿಂಗಳಿಗೆ ರೂ. 25,000-00 ಮತ್ತು ಹೆಚ್ಚಿನ ಸಂದರ್ಭಾನುಸಾರವಾಗಿ, ಸಂಬಳ ಅಥವಾ ಮಜೂರಿಯನ್ನು ಅಥವಾ ಇವೆರಡನ್ನೂ ಪಡೆಯವ ವ್ಯಕ್ತಿಗಳು | ತಿಂಗಳಿಗೆ ರೂ.200-00 |
| 2 | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 ರಡಿಯಲ್ಲಿ ನೋಂದಾಯಿಸಿದ ಅಥವಾ ನೋಂದಣಿ ಪಡೆಯಲು ಬಾಧ್ಯರಾಗಿರುವ ವ್ಯಕ್ತಿಗಳು | ವರ್ಷಕ್ಕೆ ರೂ.2,500-00 |
| 3 | ಕಾನೂನು ವೃತ್ತಿನಿರತರು, ಸಮಾಲೋಚಕರು, ಏಜೆಂಟ್‌ರು, ಚಾರ್ಟೆಂಡ್ ಅಕೌಂಟೆಂಟ್‌ಗಳು ಮತ್ತು ವಿಮಾಗಣಕರು (actuaries), ಇಂಜಿನಿಯರ್ ಗಳು, ಆರೋಗ್ಯಪಾಲನಾ ವೃತ್ತಿಪರರು, ಎಸ್ಟೇಟ್ ಏಜೆಂಟ್‌ರು ಅಥವಾ ದಳ್ಳಾಳಿಗಳು, ಬ್ಯೂಟಿ ಪಾರ್ಲರ್‌ಗಳು, ಡ್ರೈಕ್ಲೀನರ್ಸ್ ಮತ್ತು ಆಂತರಿಕ ವಿನ್ಯಾಸಕಾರರು, ಪತ್ರಕರ್ತಕರುಗಳು ಮತ್ತು ಜಾಹೀರಾತು ಏಜೆನ್ಸಿಗಳು. ಡಿಶ್, ಆಂಟೆನಾ ಕೇಬಲ್ ಟಿವಿ ಬಳಸಿ ಮನರಂಜನೆಯನ್ನು ಒದಗಿಸುವವರು, ಅವಧಿ ಕಾಲ ಬಳಕೆ ಮಾರಾಟದ (selling timing) ಗಣಕಯಂತ್ರ ಸಂಸ್ಥೆಗಳು, ಗಣಕಯಂತ್ರ ತರಬೇತಿ ಸಂಸ್ಥೆಗಳು / ಚಾಲನಾ (driving) ಸಂಸ್ಥೆಗಳು / ತಾಂತ್ರಿಕ ತರಬೇತಿ ಸಂಸ್ಥೆಗಳು, ಜ್ಯೋತಿಷಿಗಳು, ಹಸ್ತ ಸಾಮುದ್ರಿಕ ಶಾಸ್ತ್ರಜ್ಞರು (astro palmist), ಸಂಖ್ಯಾ ಶಾಸ್ತ್ರಜ್ಞರು (numerologist), ವಾಸ್ತು ಸಲಹೆಗಾರರು ಮತ್ತು ನಂಬಿಕೆಯಾಧಾರಿತ ಚಿಕಿತ್ಸಕರನ್ನು (faith healers) ಒಳಗೊಂಡಂತೆ ವೃತ್ತಿಗಳು, ಕಸುಬುಗಳು, | ವರ್ಷಕ್ಕೆ ರೂ.2,500-00 |

| | | |
|---|---|---|
| | ಆಜೀವಿಕೆಗಳು ಮತ್ತು ಉದ್ಯೋಗಗಳಲ್ಲಿ, ಎರಡು ವರ್ಷಗಳಿಗಿಂತ ಹೆಚ್ಚು ಕಾಲ ತೊಡಗಿಸಿಕೊಂಡಿರುವ ಸ್ವಯಂ ಉದ್ಯೋಗಿ ವ್ಯಕ್ತಿಗಳು. | |
| 4 | ಕುದುರೆಗಳ ಮಾಲೀಕರು ಮತ್ತು ತರಬೇತಿದಾರರು, ಜಾಕಿಗಳು, ನಿರ್ದೇಶಕರು, ನಟ ಮತ್ತು ನಟಿಯರು (ಕಿರಿಯ ಕಲಾವಿದರನ್ನು ಹೊರತುಪಡಿಸಿ), ಆಯಿಲ್ ಪಂಪ್‌ಗಳು ಮತ್ತು ಸೇವಾ ಕೇಂದ್ರಗಳು, ಗ್ಯಾಸ್ ಸ್ಟೇಷನ್‌ಗಳು, ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್‌ಗಳ ಮಾಲೀಕರು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವುದನ್ನು ಹೊರತುಪಡಿಸಿದ ನರ್ಸಿಂಗ್ ಹೋಮ್‌ಗಳು, ಆಸ್ಪತ್ರೆಗಳು, ರೋಗಪತ್ತೆ ಕೇಂದ್ರಗಳು, ಕ್ಲಿನಿಕಲ್ ಲ್ಯಾಬೋರೇಟರಿಗಳು ಮತ್ತು ಎಕ್ಸ್‌ರೇ ಕ್ಲಿನಿಕ್‌ಗಳ ಮಾಲೀಕರು, ದೈಹಿಕ ವ್ಯಾಯಾಮ ಮತ್ತು ಸುಸ್ಥಿತಿ ಕೇಂದ್ರಗಳ ಮಾಲೀಕರು | ವರ್ಷಕ್ಕೆ ರೂ.2,500-00 |
| 5 | ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವುದನ್ನು ಹೊರತುಪಡಿಸಿದ, ಶಿಕ್ಷಣ ಸಂಸ್ಥೆಗಳು ಮತ್ತು ಟ್ಯುಟೋರಿಯಲ್ ಕಾಲೇಜುಗಳು ಅಥವಾ ಸಂಸ್ಥೆಗಳು. | ವರ್ಷಕ್ಕೆ ರೂ.2,500-00 |
| 6 | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ರ ಅಡಿಯಲ್ಲಿ ಪರಿಭಾಷಿಸಲಾದ ಐದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ನೇಮಿಸಿಕೊಂಡಿರುವ ಸಂಸ್ಥೆಗಳ ಉದ್ಯೋಗದಾತರು. | ವರ್ಷಕ್ಕೆ ರೂ.2,500-00 |
| 7 | ಪರವಾನಿಗೆ ಪಡೆದ ಮದ್ಯ ಮಾರಾಟಗಾರರು, ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961ರಡಿಯಲ್ಲಿ ಪರವಾನಗಿ ಪಡೆದ ಲೇವಾದೇವಿದಾರರು, ಚಿಟ್‌ಫಂಡ್ ನಡೆಸುತ್ತಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು. | ವರ್ಷಕ್ಕೆ ರೂ.2,500-00 |
| 8 | ಮೋಟಾರು ವಾಹನಗಳ ಅಧಿನಿಯಮ 1988 (1988 ಕೇಂದ್ರ ಅಧಿನಿಯಮ 59)ರಡಿಯಲ್ಲಿ ಸ್ವಂತ ಅಥವಾ ಬಾಡಿಗೆಗೆ ಉಪಯೋಗಿಸಲಾಗುವ, ಸಾರಿಗೆ ವಾಹನಗಳ ಕೊಡಲಾದ ಪರ್ಮಿಟ್ಟುಗಳನ್ನು ಹೊಂದಿರುವ, ಸಾರಿಗೆ ವಾಹನಗಳ ಮಾಲೀಕರು (ಆಟೋ ರಿಕ್ಷಾಗಳನ್ನು ಹೊರತುಪಡಿಸಿ); ಸರಕು ಸಾರಿಗೆ ಏಜನ್ಸಿಗಳು (ಜಿಟಿಎ) ಮತ್ತು ರವಾನೆ ಮತ್ತು ತೀರಿಕೆ ಏಜೆಂಟರನ್ನು ಒಳಗೊಂಡಂತೆ ಸಾರಿಗೆ ಗುತ್ತಿಗೆದಾರರು.<br>**ವಿವರಣೆ-** ಈ ನಮೂದಿನ ಉದ್ದೇಶಕ್ಕಾಗಿ, ಸರಕು ಸಾರಿಗೆ ಏಜನ್ಸಿ (ಜಿಟಿಎ) ಎಂದರೆ ರಸ್ತೆಯ ಮೂಲಕ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ, ಸೇವೆಯನ್ನು ಒದಗಿಸುವ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಸರಕು ರವಾನೆ ಪತ್ರವನ್ನು (consignment note) ನೀಡುವ ಯಾವುದೇ ವ್ಯಕ್ತಿ. | ವರ್ಷಕ್ಕೆ ರೂ.2,500-00 |
| 9 | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕದ ಅಧಿನಿಯಮ 11) ಮೇರೆಗೆ ನೋಂದಾಯಿಸಲಾದ ಸಹಕಾರಿ ಸಂಘಗಳು ಮತ್ತು ಯಾವುದೇ ವೃತ್ತಿಗಳ, ಕಸುಬುಗಳ ಅಥವಾ ಆಜೀವಿಕೆಗಳಲ್ಲಿ ತೊಡಗಿರುವರು. | ವರ್ಷಕ್ಕೆ ರೂ.2,500-00 |
| 10 | ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಮೇರೆಗೆ ನೋಂದಾಯಿಸಲಾದ ಮತ್ತು ಯಾವುದೇ ವೃತ್ತಿಗಳ, ಕಸುಬುಗಳ ಅಥವಾ ಆ ಜೀವಿಕೆಗಳಲ್ಲಿ ತೊಡಗಿರುವ ಕಂಪನಿಗಳು; | ವರ್ಷಕ್ಕೆ ರೂ.2,500-00 |

| | | |
|---|---|---|
| | ಬ್ಯಾಂಕಿಂಗ್ ನಿಯಂತ್ರಣದ ಅಧಿನಿಯಮ, 1949ರಲ್ಲಿ ಪರಿಭಾಷಿಸಲಾದ ಬ್ಯಾಂಕಿಂಗ್ ಕಂಪನಿಗಳು.<br>**ವಿವರಣೆ.-** ಈ ನಮೂದಿನ ಉದ್ದೇಶಕ್ಕಾಗಿ, "ಬ್ಯಾಂಕಿಂಗ್ ಕಂಪನಿಗಳು" ಎಂದರೆ, ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) ಉಪಬಂಧದ ಮೂಲಕ ಕಾರ್ಯಾಚರಣೆಯನ್ನು ನಿರ್ವಹಿಸುವ ಯಾವುದೇ ಬ್ಯಾಂಕ್‌ನ್ನು ಒಳಗೊಳ್ಳುವುದು. | |
| 11 | ಹಿಂದಿನ ಯಾವುದೇ ನಮೂದುಗಳಲ್ಲಿ ನಮೂದಿಸಿರುವ ವ್ಯಕ್ತಿಗಳನ್ನು ಹೊರತುಪಡಿಸಿ, ಯಾವುದೇ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಅಥವಾ ಉದ್ಯೋಗಗಳಲ್ಲಿ ನಿರತರಾಗಿರುವ ಮತ್ತು ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 43)ರ ಅಡಿಯಲ್ಲಿ ತೆರಿಗೆ ಪಾವತಿಸುವ ವ್ಯಕ್ತಿಗಳು. | ವರ್ಷಕ್ಕೆ ರೂ.2,500-00 |
| 12 | ಯಾವುದೇ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಅಥವಾ ಉದ್ಯೋಗಗಳಲ್ಲಿ ನಿರತರಾಗಿರುವ ಹಿಂದಿನ ಯಾವುದೇ ನಮೂದುಗಳಲ್ಲಿ ನಮೂದಿಸಿದ ವ್ಯಕ್ತಿಗಳನ್ನು ಹೊರತುಪಡಿಸಿ, ಕನಿಷ್ಟ ಎರಡು ವರ್ಷಗಳ ಕಾಲಾವಧಿಯೊಂದಿಗೆ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಅಧಿಸೂಚನೆಯಲ್ಲಿ ವಿನಾಯಿತಿಯನ್ನು ಪಡೆಯದಿರುವ ವ್ಯಕ್ತಿಗಳು. | ವರ್ಷಕ್ಕೆ ರೂ.2,500-00 |

**ವಿವರಣೆ I. -** ಈ ಅನುಸೂಚಿಯಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು ಅನುಸೂಚಿಯಲ್ಲಿ ಒಂದಕ್ಕಿಂತ ಹೆಚ್ಚು ನಮೂದುಗಳಲ್ಲಿ ಸೇರಿದ್ದರೆ, ಅಂತಹ ಯಾವುದೇ ಒಂದು ನಮೂದಿನ ಅಡಿಯಲ್ಲಿ ತೆರಿಗೆಯನ್ನು ಪಾವತಿಸತಕ್ಕದ್ದು.

**ವಿವರಣೆ II. -** ಈ ಅನುಸೂಚಿಯಲ್ಲಿ 4ನೇ ಕ್ರಮ ಸಂಖ್ಯೆಯ ಪ್ರಕಾರ ತೆರಿಗೆಯ ಹೊಣೆಗಾರಿಕೆಯನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, ವರ್ಷದ ಯಾವುದೇ ಸಮಯದಲ್ಲಿರುವ ಕೆಲಸಗಾರರ ಮತ್ತು/ಅಥವಾ ಉದ್ಯೋಗಿಗಳ ಅತ್ಯಂತ ಹೆಚ್ಚಿನ ಸಂಖ್ಯೆಯ ಆಧಾರವೆಂಬುದಾಗಿ ಪರಿಗಣಿಸತಕ್ಕದ್ದು.

**ವಿವರಣೆ III. -** ಈ ಅನುಸೂಚಿಯ ಉದ್ದೇಶಗಳಿಗಾಗಿ, ಯಾವುದೇ ಆಸ್ತಿಯನ್ನು ಅಥವಾ ವ್ಯವಹಾರವನ್ನು, ಗುತ್ತಿಗೆದಾರರನ್ನು ಗುತ್ತಿಗೆಗೆ ಪಡೆದಿದ್ದಲ್ಲಿ ಅಂಥ ಗುತ್ತಿಗೆದಾರನು ಈ ಅಧಿನಿಯಮದಡಿಯಲ್ಲಿ ಹೊಣೆಗಾರನಾದ ವ್ಯಕ್ತಿ ಎಂದು ಭಾವಿಸತಕ್ಕದ್ದು."

**ವಿವರಣೆ IV. -** ಯಾವುದೇ ವೃತ್ತಿ, ಕಸುಬು ಅಥವಾ ಆಜೀವಿಕೆಯಲ್ಲಿ ತೊಡಗಿರುವ ಸಂಸ್ಥೆಯ ಯಾವುದೇ ಪಾಲುದಾರರ ಮೇಲೆ, ಅಂತಹ ಸಂಸ್ಥೆಯು ತೆರಿಗೆಯನ್ನು ಪಾವತಿಸಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

**ವಿವರಣೆ V. -** ಈ ಅನುಸೂಚಿಯಲ್ಲಿ ಏನೇ ಒಳಗೊಂಡಿದ್ದರೂ, ಅನುಸೂಚಿಯ ಯಾವುದೇ ಅಂಶದಲ್ಲಿ ನಮೂದಿಸಲಾದ ವ್ಯಕ್ತಿಯ ಪ್ರತಿಯೊಂದು ಹೆಚ್ಚುವರಿ ಸ್ಥಳವನ್ನು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವೃತ್ತಿ ತೆರಿಗೆಯನ್ನು ವಿಧಿಸುವ ಉದ್ದೇಶಕ್ಕಾಗಿ, ಪ್ರತ್ಯೇಕ ವ್ಯಕ್ತಿ ಎಂದು ಭಾವಿಸತಕ್ಕದ್ದು ಮತ್ತು ಸರಕುಗಳನ್ನು ಸಂಗ್ರಹಿಸಲು ಗೋದಾಮಿನಂತೆ ವಿಶೇಷವಾಗಿ ಬಳಸಲಾಗುವ

ಹೆಚ್ಚುವರಿ ವ್ಯವಹಾರ ಸ್ಥಳಗಳ ಸಂದರ್ಭದಲ್ಲಿ ಈ ವಿವರಣೆಯಲ್ಲಿರುವುದಾವುದೂ ಅನ್ವಯವಾಗತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸರ್ಕಾರದಿಂದ ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಯನ್ನು ವಿಧಿಸಲು ಹಾಗೂ ಸಂಗ್ರಹಿಸುವ ಉದ್ದೇಶದಿಂದ ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ಅಧಿನಿಯಮಿತಗೊಳಿಸಲಾಗಿದೆ.

ಆದಾಗ್ಯೂ, ಜಿಎಸ್‌ಟಿ ಅಧಿನಿಯಮವನ್ನು ಅನುಷ್ಠಾನಗೊಳಿಸಿದ ನಂತರ, ಈ ಕೆಲವೊಂದು ತೊಂದರೆಗಳನ್ನು ಎದುರಿಸಲಾಗುತ್ತಿದೆ. ಈ ತೊಂದರೆಗಳನ್ನು ನಿವಾರಿಸಲು ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

2023-24ನೇ ಸಾಲಿನ ಆಯವ್ಯಯ ಭಾಷಣದಲ್ಲಿನ 443ನೇ ಖಂಡಿಕೆಯಲ್ಲಿ ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ 2023, ಇತರ ವಿಷಯಗಳ ಜೊತೆಗೆ, ಈ ಕೆಳಕಂಡವುಗಳಿಗೆ ಉಪಬಂಧವನ್ನು ಕಲ್ಪಿಸಲು ಪ್ರಸ್ತಾಪಿಸಲಾಗಿರುತ್ತದೆ. ಎಂದರೆ:-

(1) "ಏಜೆಂಟ್" ಎಂಬ ಪದಕ್ಕೆ, ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಲ್ಲಿ ಇನ್ನೊಬ್ಬ ವ್ಯಕ್ತಿಯ ಪರವಾಗಿ ಕಾರ್ಯನಿರ್ವಹಿಸುವ ಒಬ್ಬ ವ್ಯಕ್ತಿ ಎಂಬ ಪರಿಭಾಷೆಯನ್ನು ಕಲ್ಪಿಸುವ ಸಲುವಾಗಿ, ಪ್ರಕರಣ 2ರ ಖಂಡ (ಎ) ನಂತರ, ಹೊಸ ಖಂಡ (ಎಎ) ಅನ್ನು ಸೇರ್ಪಡೆ ಮಾಡಲು;

ಈ ಅಧಿನಿಯಮದ ಉದ್ದೇಶಗಳಿಗಾಗಿ, "ಕರನಿರ್ಧರಣೆ" ಎಂಬ ಪದಕ್ಕೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಬಾಧ್ಯತೆಯನ್ನು ನಿರ್ಧರಿಸುವುದು ಮತ್ತು ಸ್ವಯಂ-ಕರನಿರ್ಧರಣೆ, ಮರು-ಕರನಿರ್ಧರಣೆ ಮತ್ತು ಅತ್ಯುತ್ತಮ ವಿವೇಚನಾ ಕರನಿರ್ಧರಣೆಯನ್ನು ಒಳಗೊಳ್ಳುತ್ತದೆ ಎಂಬ ಪರಿಭಾಷೆಯನ್ನು ಕಲ್ಪಿಸುವ ಸಲುವಾಗಿ, ಪ್ರಕರಣ 2ರ ಖಂಡ (ಎಎ) ನಂತರ, ಹೊಸ ಖಂಡ (ಎಬಿ) ಅನ್ನೂ ಸೇರ್ಪಡೆ ಮಾಡಲು;

ಮಾಲೀಕತ್ವದ ಘಟಕಕ್ಕೆ ತೆರಿಗೆಯನ್ನು ವಿಧಿಸುವ ಸಂದರ್ಭದಲ್ಲಿ ಇರುವ ದ್ವಂದ್ವವನ್ನು ನಿವಾರಣೆ ಮಾಡಲು, ಮಾಲೀಕತ್ವ ಘಟಕ ಎಂದರೆ ಪರಿಭಾವಿತ ವ್ಯಕ್ತಿ ಎಂದು ವಿವರಣೆಯಲ್ಲಿ ಸೇರಿಸುವುದಕ್ಕಾಗಿ, ಪ್ರಕರಣ 2ರ ಖಂಡ (ಹೆಚ್) ಅನ್ನು ತಿದ್ದುಪಡಿ ಮಾಡಲು;

(2) ಮಾಹಿತಿಯನ್ನು ಉದ್ದೇಶ ಪೂರ್ವಕವಾಗಿ ಬಹಿರಂಗಪಡಿಸದ ಅಥವಾ ತೆರಿಗೆಯನ್ನು ತಪ್ಪಿಸಿಕೊಳ್ಳಲು ಉದ್ಯೋಗದಾತನು ಅಥವಾ ವ್ಯಕ್ತಿಯು ಪ್ರಯತ್ನಿಸಿ ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡರೆ, ಅದನ್ನು ಸಂದಾಯ ಮಾಡಬೇಕಾದ ತೆರಿಗೆಯ ಒಂದೂವರೆ ಪಟ್ಟು ದಂಡವನ್ನು, ಜಿಎಸ್‌ಟಿ ಅಧಿನಿಯಮದ ಅನುಗುಣವಾಗಿ ತೆರಿಗೆಯ ಶೇಕಡಾ ನೂರರಷ್ಟಕ್ಕೆ ಸಮನಾದ ಮೊತ್ತಕ್ಕೆ ಕಡಿತಗೊಳಿಸುವುದಕ್ಕಾಗಿ, ಪ್ರಕರಣ 9ರ ಉಪ-ಪ್ರಕರಣ (2) ಅನ್ನು ತಿದ್ದುಪಡಿ ಮಾಡಲು;

(3) ತೆರಿಗೆಯನ್ನು ಸಂದಾಯ ಮಾಡಲು ತಪ್ಪಿರುವ ಒಬ್ಬ ಉದ್ಯೋಗದಾತನು ಪ್ರತಿ ತಿಂಗಳಿಗೆ ಸಂದಾಯ ಮಾಡಬೇಕಾದ ಶೇಕಡಾ ಎರಡರ ಬಡ್ಡಿ ದರವನ್ನು, ಜಿಎಸ್‌ಟಿ ಅಧಿನಿಯಮದ ಅನುಗುಣವಾಗಿ ಪ್ರತಿ ತಿಂಗಳಿಗೆ ಶೇಕಡಾ ಒಂದೂವರೆಯಷ್ಟಕ್ಕೆ ಕಡಿತಗೊಳಿಸುವುದಕ್ಕಾಗಿ, ಪ್ರಕರಣ 10ರ ಉಪ-ಪ್ರಕರಣ (6)ನ್ನು ತಿದ್ದುಪಡಿ ಮಾಡಲು;

(4) ಯಾವುದೇ ಉದ್ಯೋಗದಾತನು ಸಂಬಳ ಅಥವಾ ಮಜೂರಿಯ ಸಂದಾಯದ ಸಮಯದಲ್ಲಿ ತೆರಿಗೆಯನ್ನು ಕಟಾಯಿಸದಿದ್ದಲ್ಲಿ ಅಥವಾ ಕಟಾಯಿಸಿದ ನಂತರ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದರೆ, ಸಂದಾಯ ಮಾಡಬೇಕಾದ ಶೇಕಡಾ ಒಂದೂ ಕಾಲರಷ್ಟರ ಬಡ್ಡಿಯ ದರವನ್ನು, ಜಿಎಸ್‌ಟಿ ಅಧಿನಿಯಮದ ಅನುಗುಣವಾಗಿ ಶೇಕಡಾ ಒಂದೂವರೆಯಷ್ಟಕ್ಕೆ ಹೆಚ್ಚಿಸಲು, ಪ್ರಕರಣ 11ರ ಉಪ-ಪ್ರಕರಣ (2)ನ್ನು ತಿದ್ದುಪಡಿ ಮಾಡಲು;

(5) ಒಬ್ಬ ನೋಂದಾಯಿತನಾದ ಉದ್ಯೋಗದಾತನು ಅಗತ್ಯಪಡಿಸಿದ ಸಮಯದೊಳಗೆ ತೆರಿಗೆಯನ್ನು ಸಂದಾಯ ಮಾಡದಿದ್ದುದಕ್ಕಾಗಿ ಪಾವತಿಸಬೇಕಾದ ಶೇಕಡಾ ಐವತ್ತರಷ್ಟನ್ನು ಮೀರದ ದಂಡವನ್ನು, ಒಂದು ಸಮಂಜಸವಾದ ಕಾರಣವಿದ್ದರೂ ಅಥವಾ ಇಲ್ಲದಿದ್ದರೂ ಶೇಕಡಾ ಹತ್ತರಷ್ಟು ಸ್ಥಿರವಾದ ಮೊತ್ತಕ್ಕೆ ಅದನ್ನು ಕಡಿತಗೊಳಿಸುವುದಕ್ಕಾಗಿ, ಪ್ರಕರಣ 12ನ್ನು ತಿದ್ದುಪಡಿ ಮಾಡಲು; ಮತ್ತು

(6) ಜಿಎಸ್‌ಟಿ ಅಧಿನಿಯಮದ ಅನುಷ್ಠಾನದ ಹಿನ್ನೆಲೆಯಲ್ಲಿ, ಪ್ರಸ್ತುತ ಸನ್ನಿವೇಶಗಳಿಗೆ ಹೊಂದಾಣಿಕೆಯಾಗುವಂತೆ ಈ ಅಧಿನಿಯಮದಡಿ ಅನುಸೂಚಿಯನ್ನು ಪ್ರತಿಯೋಜಿಸುವುದಕ್ಕಾಗಿ ಮತ್ತು

ಸಂದಾಯ ಮಾಡಬೇಕಾದ ತೆರಿಗೆಯನ್ನು ಕ್ರಮಬದ್ಧಗೊಳಿಸಬೇಕಾಗಿದೆ. ಮುಂದುವರೆದು, ದ್ವಂದ್ವವನ್ನು ನಿವಾರಣೆ ಮಾಡುವುದಕ್ಕಾಗಿ ವಿವರಣೆಗಳನ್ನು ಸಹ ಪ್ರತಿಯೋಜಿಸಬೇಕಾಗಿದೆ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

### ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ, 1976ರ 35)ರ ಉದ್ಧೃತ ಭಾಗ

**XX XX XX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

**XX XX XX**

(ಎಚ್)``ವ್ಯಕ್ತಿ'' ಎಂದರೆ; ಕರ್ನಾಟಕ ರಾಜ್ಯದಲ್ಲಿ ಯಾವುದೇ ವೃತ್ತಿ, ಕಸಬು ಆಜೀವಿಕೆ ಅಥವಾ ಉದ್ಯೋಗದಲ್ಲಿ ತೊಡಗಿರುವ ಯಾವನೇ ವ್ಯಕ್ತಿ ಮತ್ತು ಇದು, ಹಾಗೆ ತೊಡಗಿರುವ ಹಿಂದೂ ಅವಿಭಕ್ತ ಕುಟುಂಬ, ಫರ್ಮು, ಕಂಪನಿ, ನಿಗಮ ಅಥವಾ ಇತರ ನಿಗಮಿತನಿಕಾಯ, ಯಾವುದೇ ಸಂಘ, ಕ್ಲಬ್ ಅಥವಾ ಸಂಸ್ಥೆಯನ್ನು ಒಳಗೊಳ್ಳುತ್ತದೆ. ಆದರೆ ಸಾಂಧರ್ಭಿಕವಾಗಿ ಮಜೂರಿಯನ್ನು ಗಳಿಸುವ ಯಾವನೇ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ.

**ವಿವರಣೆ:** ಪ್ರತಿಯೊಂದು ಫರ್ಮು, ಕಂಪನಿ, ನಿಗಮ ಅಥವಾ ಇತರ ನಿಗಮ, ನಿಕಾಯ, ಯಾವುದೇ ಸೊಸೈಟಿ, ಕ್ಲಬ್ ಅಥವಾ ಸಂಘದ ಶಾಖೆಯನ್ನು ವ್ಯಕ್ತಿ ಎಂಬುದಾಗಿ ಭಾವಿಸತಕ್ಕದ್ದು.

**XX XX XX**

**9. ತಪ್ಪಿಸಕೊಂಡ ತೆರಿಗೆಯ ನಿರ್ಧರಣೆ.- (1)**

**XX XX XX**

(2) (1)ನೇ ಉಪಪ್ರಕರಣದ ಮೇರೆಗೆ ತೆರಿಗೆ ನಿರ್ಧರಣೆಯನ್ನು ಮಾಡುವಲ್ಲಿ, ಮಾಹಿತಿಯನ್ನು ಬುದ್ಧಿಪೂರ್ವಕವಾಗಿ ಬಹಿರಂಗಪಡಿಸದಿರುವುದರಿಂದ ಅಥವಾ ತೆರಿಗೆಯನ್ನು ತಪ್ಪಿಸಕೊಳ್ಳಲು ನಿಯೋಜಕನು ಅಥವಾ ವ್ಯಕ್ತಿಯು ಪ್ರಯತ್ನಿಸಿದುದರಿಂದ ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಳ್ಳಲಾಗಿತ್ತೆಂದು ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಮನದಟ್ಟಾದರೆ, (1)ನೇ ಉಪಪ್ರಕರಣದ ಮೇರೆಗೆ ನಿರ್ಧರಿಸಲಾದ ತೆರಿಗೆಯ ಜೊತೆಗೆ ಹಾಗೆ ನಿರ್ಧರಿಸಲಾದ ತೆರಿಗೆಯ ಒಂದೂವರೆಯಷ್ಟಕ್ಕೆ ಮೀರದ ದಂಡವನ್ನು ಸಂದಾಯ ಮಾಡುವಂತೆ ಅಂಥ ನಿಯೋಜಕನಿಗೆ ಅಥವಾ ವ್ಯಕ್ತಿಗೆ ನಿರ್ದೇಶಿಸಬಹುದು;

ಪರಂತು, ಹಾಗೆ ದಂಡವನ್ನು ವಿಧಿಸಿದುದರ ವಿರುದ್ಧವಾಗಿ ಸಾಕಷ್ಟು ಕಾರಣವನ್ನು ತೋರಿಸಲು ಬಾಧಿತ ನಿಯೋಜಕನಿಗೆ ಅಥವಾ ವ್ಯಕ್ತಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಈ ಉಪಪ್ರಕರಣದ ಮೇರೆಗೆ ಯಾವ ದಂಡವನ್ನೂ ವಿಧಿಸತಕ್ಕುದಲ್ಲ.

**XX XX XX**

**10. ದಾಖಲಾದ ವ್ಯಕ್ತಿಗಳಿಂದ ತೆರಿಗೆ ಸಂದಾಯ.- (1)**

**XX XX XX**

6. ಉಪಪ್ರಕರಣ (5)ರಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ನಂತರ ಹತ್ತು ದಿನಗಳನ್ನು ಮೀರಿ ಕಟಾವಣೆಯಾದ ತೆರಿಗೆಯ ಪಾವತಿಯಲ್ಲಿ ಲೋಪವನ್ನು ಎಸಗಿದರೆ, ಅಂಥ ವ್ಯಕ್ತಿಯು ತೆರಿಗೆ ಪಾವತಿಯಾಗದ ಅವಧಿಗಾಗಿ ತೆರಿಗೆ ಬಾಕಿ ಮೊತ್ತದ ಪ್ರತಿಯೊಂದು ತಿಂಗಳು ಅಥವಾ ಅದರ ಭಾಗಕ್ಕೆ 2%ರಷ್ಟು ಬಡ್ಡಿಯನ್ನು ಪಾವತಿಸಲು ಹೊಣೆಗಾರನಾಗತಕ್ಕದ್ದು.

**XX XX XX**

**11. ತೆರಿಗೆಯನ್ನು ಮುರಿದುಕೊಳ್ಳಲು ಅಥವಾ ಸಂದಾಯ ಮಾಡಲು ತಪ್ಪಿದುದರ ಪರಿಣಾಮಗಳು.-(1)**

**XX XX XX**

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾದಕವಾಗದಂತೆ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿತವಾದ ನಿಯೋಜಕನು ಸಂಬಳದ ಅಥವಾ ಮಜೂರಿಯ ಸಂದಾಯದ ಸಮಯದಲ್ಲಿ ತೆರಿಗೆಯನ್ನು ಮುರಿದುಕೊಳ್ಳದಿದ್ದರೆ, ಅಥವಾ ಮುರಿದುಕೊಂಡ ಅನಂತರ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದರೆ, ಯಾವ ಅವಧಿಯ ತೆರಿಗೆಯು ಸಂದಾಯವಾಗದೆ ಉಳಿದಿದೆಯೋ ಆ ಅವಧಿಯ ಪ್ರತಿ ತಿಂಗಳಿಗೆ ಅಥವಾ ಅದರ ಭಾಗಕ್ಕೆ ಕೊಡಬೇಕಾಗಿರುವ ತೆರಿಗೆಯ ಮೊಬಲಗಿನ ಮೇಲೆ ಶೇಕಡ ಎರಡರ ಸರಳ ಬಡ್ಡಿಯನ್ನು ಸಂದಾಯ ಮಾಡಲು ಅವನು ಹೊಣೆಗಾರನಾಗಿರತಕ್ಕುದು.

**XX XX XX**

**12. ತೆರಿಗೆಯನ್ನು ಸಂದಾಯ ಮಾಡದಿರುವುದಕ್ಕೆ ದಂಡ.-** ದಾಖಲಾಗಿರುವ ವ್ಯಕ್ತಿಯು ಅಥವಾ ನೋಂದಾಯಿತನಾಗಿರುವ ನಿಯೋಜಕನು, ತಗಾದೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾದ ಅಗತ್ಯ ಕಾಲದೊಳಗೆ ಅಥವಾ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಯಾವುದೇ ತೆರಿಗೆ ಮೊಬಲಗನ್ನು ಸಂದಾಯ ಮಾಡಲು ಯುಕ್ತ ಕಾರಣವಿಲ್ಲದೆ ತಪ್ಪಿದರೆ, ತೆರಿಗೆ ನಿರ್ಧರಣ ಪ್ರಾಧಿಕಾರವು, ಮನವಿಯನ್ನು ಸಲ್ಲಿಸಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಅನಂತರ ಕೊಡಬೇಕಾಗಿರು ತೆರಿಗೆ ಮೊಬಲಗಿನ ಮೇಲೆ ಶೇಕಡ ಐವತ್ತಕ್ಕೆ ಮೀರದ ದಂಡವನ್ನು ಅವನಿಗೆ ವಿಧಿಸತಕ್ಕುದು. ಈ ದಂಡವು 11ನೇ ಪ್ರಕರಣದ (2)ನೇ ಅಥವಾ (3)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಬಡ್ಡಿಯ ಜೊತೆಗೆ ಇರತಕ್ಕುದು.

**XX XX XX**

**ಅನುಸೂಚಿ**

**(3 (2) ಪ್ರಕರಣವನ್ನು ನೋಡಿ)**

| **ಕ್ರ. ಸಂ.** | **ವ್ಯಕ್ತಿಗಳ ವರ್ಗ** | **ತೆರಿಗೆಯ ದರ** |
|---|---|---|
| 1 | ತಿಂಗಳಿಗೆ ಯಾರ ವೇತನ ಅಥವಾ ಕೂಲಿ ಅಥವಾ ಸಂದರ್ಭಾನುಸಾರ ಎರಡೂ,-<br>(ಎ) [XXX]<br>(ಬಿ) [XXX]<br>(ಸಿ) [XXX]<br>(ಡಿ) [XXX]<br>(ಇ) ರೂ.15,000 ಮತ್ತು ಅಧಿಕ | [XXX]<br>[XXX]<br>[XXX]<br>[XXX]<br>ರೂ.200 ಪ್ರತಿ ತಿಂಗಳು |
| 2 | ಸಾಲಿಸಿಟರ್‌ಗಳು ಮತ್ತು ಸಾರ್ವಜನಿಕ ನೋಟರಿಗಳನ್ನೊಳಗೊಂಡು ಕಾನೂನು ವೃತ್ತಿನಿರತರು:-<br>(ಎ) ಬೆಂಗಳೂರು ನಗರ ಸಮುಚ್ಚಯದಲ್ಲಿ ವೃತ್ತಿಪರನಾಗಿದ್ದಲ್ಲಿ-<br>(i) 10 ವರ್ಷಗಳಿಗಿಂತಲೂ ಕಡಿಮೆ<br>(ii) 10 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 20 ವರ್ಷಗಳಿಗಿಂತ ಕಡಿಮೆ<br>(iii) 20 ವರ್ಷಗಳಿಗಿಂತ ಹೆಚ್ಚು.<br>(ಬಿ) ರಾಜ್ಯದಲ್ಲಿನ ಯಾವುದೇ ಇತರ ಪ್ರದೇಶದಲ್ಲಿ,-<br>(i) 10 ವರ್ಷಗಳಿಗಿಂತಲೂ ಕಡಿಮೆ<br>(ii) 10 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 20 ವರ್ಷಗಳಿಗಿಂತ ಕಡಿಮೆ<br>(iii) 20 ವರ್ಷಗಳಿಗಿಂತ ಹೆಚ್ಚು. | ಇಲ್ಲ<br>ವಾರ್ಷಿಕವಾಗಿರೂ.1500<br>ವಾರ್ಷಿಕವಾಗಿ ರೂ.2500<br>ಇಲ್ಲ<br>ವಾರ್ಷಿಕವಾಗಿರೂ.1500<br>ವಾರ್ಷಿಕವಾಗಿ ರೂ.2500 |

| | | |
|---|---|---|
| 3 | ಅನುಸೂಚಿಯಲ್ಲಿ ಎಲ್ಲಿಯೂ ನಮೂದಿಸಿದ ಹೊರತು ತಾಂತ್ರಿಕ ಮತ್ತು ವೃತ್ತಿಪರ ಸಮಾಲೋಚಕರು ಆದರೆ ಪ್ಲಂಬಿಂಗ್ ಮತ್ತು ತೆರಿಗೆ ಸಮಾಲೋಚಕರನ್ನು ಒಳಗೊಳ್ಳುವುದು.-<br>(ಎ) ಬೆಂಗಳೂರು ನಗರ ಸಮುಚ್ಛಯದಲ್ಲಿ ವೃತ್ತಿಪರನಾಗಿದ್ದಲ್ಲಿ-<br>(i) 2 ವರ್ಷಗಳಿಗಿಂತಲೂ ಕಡಿಮೆ<br>(ii)2 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 5 ವರ್ಷಗಳಿಗಿಂತ ಕಡಿಮೆ<br>(iii) 5 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 10 ವರ್ಷಗಳಿಗಿಂತ ಕಡಿಮೆ.<br>(iv) 10 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚು.<br>(ಬಿ) ರಾಜ್ಯದಲ್ಲಿನ ಯಾವುದೇ ಇತರ ಪ್ರದೇಶದಲ್ಲಿ,-<br>(i) 2 ವರ್ಷಗಳಿಗಿಂತಲೂ ಕಡಿಮೆ<br>(ii) 2 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 10 ವರ್ಷಗಳಿಗಿಂತ ಕಡಿಮೆ<br>(iii) 10 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚು. | ಇಲ್ಲ<br>ವಾರ್ಷಿಕವಾಗಿ ರೂ.1000<br>ವಾರ್ಷಿಕವಾಗಿ ರೂ.1500<br>ವಾರ್ಷಿಕವಾಗಿ ರೂ. 2500<br>ಇಲ್ಲ<br>ವಾರ್ಷಿಕವಾಗಿ ರೂ.1000<br>ವಾರ್ಷಿಕವಾಗಿ ರೂ.1500 |
| 4 | (i) ರೂ.1,20,000/-ಕ್ಕಿಂತ ಕಡಿಯಲ್ಲದ ವಾರ್ಷಿಕ ವರಮಾನವನ್ನು ಹೊಂದಿರುವ, ಜೀವ ವಿಮಾ ಅಧಿನಿಯಮ, 1938 (1938ರ ಕೇಂದ್ರ ಅಧಿನಿಯಮ IV)ರಡಿಯಲ್ಲಿ ನೋಂದಾಯಿಸಿದ ಅಥವಾ ಲೈಸೆನ್ಸ್‌ಪಡೆದ ಮುಖ್ಯ ಏಜೆಂಟರು, ಪ್ರಧಾನ ಏಜೆಂಟರು, ವಿಶೇಷ ಏಜೆಂಟರು, ಜೀವ ವಿಮಾ ಏಜೆಂಟರು ಮತ್ತು ಮೋಜಣಿದಾರರು ಅಥವಾ ನಷ್ಟ ಮೌಲ್ಯ ನಿರ್ಧಾರಕರು. | ವಾರ್ಷಿಕವಾಗಿ ರೂ.1500 |
| | (ii) ರೂ.1,20,000/-ಕ್ಕಿಂತ ಕಡಿಯಲ್ಲದ ವಾರ್ಷಿಕ ವರಮಾನವನ್ನು ಹೊಂದಿರುವ ಪಿಗ್ಮಿ ಏಜೆಂಟರು ಅಥವಾ ಯುಟಿಐ ಏಜೆಂಟರು.<br>**ವಿವರಣೆ**: ಈ ಬಾಬ್ತಿನ ಉದ್ದೇಶಕ್ಕಾಗಿ ವರಮಾನ ಎಂದರೆ ಮುಖ್ಯ ಏಜೆಂಟರು, ಪ್ರಧಾನ ಏಜೆಂಟರು, ವಿಶೇಷ ಏಜೆಂಟರು, ಜೀವ ವಿಮಾ ಏಜೆಂಟರು ಮತ್ತು ಮೋಜಣಿದಾರರು ಅಥವಾ ನಷ್ಟ ಮೌಲ್ಯ ನಿರ್ಧಾರಕರು ಅಥವಾ ಪಿಗ್ಮಿ ಏಜೆಂಟರು ಅಥವಾ ಯುಟಿಐ ಏಜೆಂಟರುಗಳಂಥ ವ್ಯಕ್ತಿಯು ಕಮೀಷನ್ ಅಥವಾ ಯಾವುದೇ ಇತರ ಯಾವುದೇ ಹೆಸರಿನ ಮೂಲಕ ಕರೆಯಲಾಗುವ ಗೌರವಧನವೆಂದು ಭಾವಿಸತಕ್ಕದ್ದು. | ವಾರ್ಷಿಕವಾಗಿ ರೂ.1000 |
| 5. | ಚಾರ್ಟೆಡ್ ಅಕೌಂಟೆಂಟ್‌ಗಳು ಮತ್ತು ವಿಮಾ ಗಣಕರು (actuaries) ವೃತ್ತಿಪರನಾಗಿದ್ದಲ್ಲಿ,-<br>(i) 2 ವರ್ಷಗಳಿಗಿಂತಲೂ ಕಡಿಮೆ<br>(ii) 2 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 5 ವರ್ಷಗಳಿಗಿಂತ ಕಡಿಮೆ<br>(iii) 5 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚು. | ಇಲ್ಲ<br>ವಾರ್ಷಿಕವಾಗಿ ರೂ.1000<br>ವಾರ್ಷಿಕವಾಗಿ ರೂ.2500 |

| | | |
|---|---|---|
| 6. | ವೈದ್ಯಕೀಯ ಸಮಾಲೋಚಕರನ್ನು ಒಳಗೊಂಡು, ವೈದ್ಯಕೀಯ ವೃತ್ತಿನಿರತರು,<br>(ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ವೈದ್ಯಪದ್ಧತಿಗಳನ್ನು ಹೊರತುಪಡಿಸಿ) ದಂತ ವೈದ್ಯರು, ರೇಡಿಯಾಲಜಿಸ್ಟ್‌ಗಳು, ಪೆಥಾಲಾಜಿಸ್ಟಿಕ್‌ಗಳು ಮತ್ತು ಇತರ ಇದೇ ರೀತಿಯ ವೃತ್ತಿಗಳು ಅಥವಾ ಅರೆ ವೈದ್ಯಕೀಯ ಸ್ವಭಾವದ ಆಜೀವಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳು.<br>(ಎ) ಬೆಂಗಳೂರು ನಗರ ಸಮುಚ್ಛಯದಲ್ಲಿ ವೃತ್ತಿಪರನಾಗಿದ್ದಲ್ಲಿ-<br>(i) 2 ವರ್ಷಗಳಿಗಿಂತಲೂ ಕಡಿಮೆ<br>(ii) 2 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 5 ವರ್ಷಗಳಿಗಿಂತ ಕಡಿಮೆ<br>(iii) 5 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚು.<br>(ಬಿ) ರಾಜ್ಯದಲ್ಲಿನ ಯಾವುದೇ ಇತರ ಪ್ರದೇಶದಲ್ಲಿ,-<br>(i) 2 ವರ್ಷಗಳಿಗಿಂತಲೂ ಕಡಿಮೆ<br>(ii) 2 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 5 ವರ್ಷಗಳಿಗಿಂತ ಕಡಿಮೆ<br>(iii) 5 ವರ್ಷಗಳಿಗಿಂತಲೂ ಹೆಚ್ಚು ಆದರೆ 10 ವರ್ಷಗಳಿಗಿಂತಲೂ ಕಡಿಮೆ<br>(iv) 10 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು. | ಇಲ್ಲ<br>ವಾರ್ಷಿಕವಾಗಿ ರೂ.1000<br>ವಾರ್ಷಿಕವಾಗಿ ರೂ.2500<br>ಇಲ್ಲ<br>ವಾರ್ಷಿಕವಾಗಿ ರೂ.1000<br>ವಾರ್ಷಿಕವಾಗಿ ರೂ.1500<br>ವಾರ್ಷಿಕವಾಗಿ ರೂ.2500 |
| 7. | ಇಂಜಿನಿಯರ್‌ಗಳು, ಆರ್‌ಸಿಸಿ ಸಮಾಲೋಚಕರು, ವಾಸ್ತುಶಿಲ್ಪಿಗಳು (Architects) ಮತ್ತು ವ್ಯವಸ್ಥಾಪನಾ ಸಮಾಲೋಚಕರು.<br>(ಎ) ಬೆಂಗಳೂರು ನಗರ ಸಮುಚ್ಛಯದಲ್ಲಿ ವೃತ್ತಿಪರನಾಗಿದ್ದಲ್ಲಿ-<br>(i) 2 ವರ್ಷಗಳಿಗಿಂತಲೂ ಕಡಿಮೆ<br>(ii) 2 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 5 ವರ್ಷಗಳಿಗಿಂತ ಕಡಿಮೆ<br>(iii) 5 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚು.<br>(ಬಿ) ರಾಜ್ಯದಲ್ಲಿನ ಯಾವುದೇ ಇತರ ಪ್ರದೇಶದಲ್ಲಿ,-<br>(i) 2 ವರ್ಷಗಳಿಗಿಂತಲೂ ಕಡಿಮೆ<br>(ii) 2 ವರ್ಷಗಳಿಗಿಂತಲೂ ಹೆಚ್ಚಿನ ಆದರೆ 10 ವರ್ಷಗಳಿಗಿಂತ ಕಡಿಮೆ<br>(iii) 10 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು. | ಇಲ್ಲ<br>ವಾರ್ಷಿಕವಾಗಿ ರೂ.1000<br>ವಾರ್ಷಿಕವಾಗಿ ರೂ.2500<br>ಇಲ್ಲ<br>ವಾರ್ಷಿಕವಾಗಿ ರೂ.1000<br>ವಾರ್ಷಿಕವಾಗಿ ರೂ.1500 |
| 8. | ಭದ್ರತಾ ಕರಾರುಗಳ (ನಿಯಂತ್ರಣ) ಅಧಿನಿಯಮ, 1956ರಡಿಯಲ್ಲಿ ಮಾನ್ಯತೆ ಪಡೆದ ಸ್ಟಾಕ್ ಎಕ್ಸ್‌ಚೇಂಜ್‌ಳ ಸದಸ್ಯರು. | ವಾರ್ಷಿವಾಗಿ ರೂ.2500 |
| 9. | ಎಸ್ಟೇಟ್ ಏಜಂಟ್‌ರು ಅಥವಾ ಬ್ರೋಕರ್‌ಗಳು<br>(i) ಬೆಂಗಳೂರು ನಗರ ಸಮುಚ್ಛಯದಲ್ಲಿ,<br>(ii) ರಾಜ್ಯದ ಯಾವುದೇ ಇತರ ಪ್ರದೇಶದಲ್ಲಿ<br>(ಎ) ಆದಾಯ ತೆರಿಗೆದಾರರು<br>(ಬಿ) ಮೇಲಿನ (ಎ)ಯಿಂದ ಹೊರತಾದವರು | ವಾರ್ಷಿಕವಾಗಿ ರೂ.2500<br>ವಾರ್ಷಿಕವಾಗಿ ರೂ.1500<br>ವಾರ್ಷಿಕವಾಗಿ ರೂ.1000 |
| 10. | ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮ, 2017ರಡಿಯಲ್ಲಿ ಪರಿಭಾಷಿಸಿದಂತೆ, ಕಾಮಗಾರಿ ಗುತ್ತಿಗೆಗಳನ್ನು ಕಾರ್ಯಗತಗೊಳಿಸುವ ಗುತ್ತಿಗೆದಾರರು. ಸರಕು ಅಥವಾ ಸೇವೆಗಳ ಅಥವಾ ಎರಡರ ಪೂರೈಕೆಗೆ | ವಾರ್ಷಿಕವಾಗಿ ರೂ.2500 |

| | | |
|---|---|---|
| | ಸಂಬಂಧಿಸಿದಂತೆ ಒಟ್ಟು ಪ್ರತಿಫಲನ ಮೌಲ್ಯವು ವರ್ಷದಲ್ಲಿ ರೂ.20 ಲಕ್ಷಗಳು ಮತ್ತು ಹೆಚ್ಚಿನದಾಗಿದ್ದಲ್ಲಿ. | |
| 11. | (i) ಟರ್ಫ್ ಕ್ಲಬ್‌ಗಳಿಂದ ಪರವಾನಿಗೆ ಪಡೆದ ರೇಸ್ ಕುದುರೆ ಮಾಲೀಕರು ಮತ್ತು ತರಬೇತಿದಾರರು.<br>(ii) ಟರ್ಫ್ ಕ್ಲಬ್‌ಗಳಿಂದ/ರೇಸ್ ಕ್ಲಬ್‌ಗಳಿಂದ ಪರವಾನಿಗೆ ಪಡೆದ ಜಾಕಿಗಳು-<br>(ಎ) ಅಪ್ರೆಂಟಿಸ್ ಜಾಕಿಗಳ ಸಂದರ್ಭದಲ್ಲಿ<br>(ಬಿ) ಮೇಲಿನ (ಎ)ಯಿಂದ ಹೊರತಾದವರು<br>(iii) ಟರ್ಫ್ ಕ್ಲಬ್‌ಗಳಿಂದ ಪರವಾನಿಗೆ ಪಡೆದ ಬುಕ್ ಮೇಕರ್‌ಗಳು. | ವಾರ್ಷಿಕವಾಗಿ ರೂ.2500<br><br>ವಾರ್ಷಿಕವಾಗಿ ರೂ.1000<br>ವಾರ್ಷಿಕವಾಗಿ ರೂ.2500<br><br>ವಾರ್ಷಿಕವಾಗಿ ರೂ.2500 |
| 12. | ಈ ಕೆಳಕಂಡಂತೆ ಚಲನ ಚಿತ್ರೋದ್ಯಮದಲ್ಲಿ ಸ್ವಯಂ ಉದ್ಯೋಗಿ ವ್ಯಕ್ತಿಗಳು:<br>(ಎ) ನಿರ್ದೇಶಕರು, ನಟರು ಮತ್ತು ನಟಿಯರು (ಕಿರಿಯ ಕಲಾವಿದರನ್ನು ಹೊರತುಪಡಿಸಿ), ಹಿನ್ನೆಲೆ ಗಾಯಕರು, ರೆಕಾರ್ಡಿಸ್ಟ್‌ಗಳು, ಸಂಕಲನಕಾರರು.<br><br>(i) ಆದಾಯ ತೆರಿಗೆದಾರರು<br>(ii) ಮೇಲಿನ (i)ನಿಂದ ಹೊರತಾದವರು<br><br>(ಬಿ) ಕ್ಯಾಮರಾಮನ್ ಮತ್ತು ಸ್ಥಿರ ಚಿತ್ರ ಛಾಯಾಗ್ರಾಹಕರು | <br><br><br><br><br>ವಾರ್ಷಿಕವಾಗಿ ರೂ.2500<br>ವಾರ್ಷಿಕವಾಗಿ ರೂ.1500<br><br>ವಾರ್ಷಿಕವಾಗಿ ರೂ.900 |

**XX XX XX**

**ವಿವರಣೆ I. -** ಈ ಅನುಸೂಚಿಯಲ್ಲಿ ಏನೇ ಒಳಗೊಂಡಿದ್ದರೂ, ಒಬ್ಬ ವ್ಯಕ್ತಿಯು ಅನುಸೂಚಿಯಲ್ಲಿ ಒಂದಕ್ಕಿಂತ ಹೆಚ್ಚು ನಮೂದುಗಳಲ್ಲಿ ಸೇರಿದ್ದರೆ, ಆತನ ಸಂದರ್ಭದಲ್ಲಿ ಅಂತಹ ಯಾವುದೇ ಒಂದು ನಮೂದಿನ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅತಿ ಹೆಚ್ಚು ತೆರಿಗೆ ದರದಲ್ಲಿನ ನಮೂದಿಗೆ ಅನ್ವಯವಾಗತಕ್ಕದ್ದು.

**ವಿವರಣೆ II. -** ಈ ಅನುಸೂಚಿಯಲ್ಲಿ 15ನೇ ಕ್ರಮ ಸಂಖ್ಯೆಯ ಪ್ರಕಾರ ತೆರಿಗೆಯ ಹೊಣೆಗಾರಿಕೆಯನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, ವರ್ಷದ ಯಾವುದೇ ಸಮಯದಲ್ಲಿರುವ ಕೆಲಸಗಾರರ ಮತ್ತು/ಅಥವಾ ಉದ್ಯೋಗಿಗಳ ಅತ್ಯಂತ ಹೆಚ್ಚಿನ ಸಂಖ್ಯೆಯ ಆಧಾರವೆಂಬುದಾಗಿ ಪರಿಗಣಿಸತಕ್ಕದ್ದು.

**ವಿವರಣೆ III. -** ಈ ಅನುಸೂಚಿಯ 16ನೇ ಕ್ರಮ ಸಂಖ್ಯೆಯ ಉದ್ದೇಶಗಳಿಗಾಗಿ, ಯಾವುದೇ ಆಸ್ತಿಯನ್ನು ಅಥವಾ ವ್ಯವಹಾರವನ್ನು, ಗುತ್ತಿಗೆದಾರರನ್ನು ಗುತ್ತಿಗೆಗೆ ಪಡೆದಿದ್ದಲ್ಲಿ ಅಂಥ ಗುತ್ತಿಗೆದಾರನು ಈ ಅಧಿನಿಯಮದಡಿಯಲ್ಲಿ ಹೊಣೆಗಾರನಾದ ವ್ಯಕ್ತಿಎಂದು ಭಾವಿಸತಕ್ಕದ್ದು."

**ವಿವರಣೆ IV. –** ಅನುಸೂಚಿಯ 2 (ಎ) (iii), 3 (ಎ) (iv), 5 (iii), 6 (ಎ) (iii), 6 (ಬಿ) (iv), 7 (ಎ) (iii), 8, 8 (i), 10 (iv), 11 (i), 11 (ii) (ಬಿ), 11 (iii), 13 (ಡಿ), 15 (iv), 16, 17, 18 (ii), 19 (i), (ಬಿ), 21, 22, 27 (ಬಿ),

29 (ಎ), 29 (ಬಿ) (i), 31, 32 (ಬಿ), 34, 37, 40, 41 (ಎ), 42, 43, 44, 45, 46 (ಡಿ), 47, 49 (ಬಿ), 51 (ಎ), 52, 53, 54, 55, 56, 60, 61, 62, 64, 66, 69 (i), 70 (i), 71 (i), 72 (i) ಮತ್ತು 73 ಅನ್ನು ಯಾವುದೇ ವೃತ್ತಿ, ಕಸುಬು ಅಥವಾ ಆಜೀವಿಕೆಯಲ್ಲಿ ತೊಡಗಿರುವ ಯಾವುದೇ ಫರ್ಮು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

**ವಿವರಣೆ V. –** ಮೇಲಿನ ವಿವರಣೆ (4)ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವೃತ್ತಿ, ಕಸುಬು ಅಥವಾ ಆಜೀವಿಕೆಯಲ್ಲಿ ತೊಡಗಿರುವ ಸಂಸ್ಥೆಯ ಯಾವುದೇ ಪಾಲುದಾರರಿಗೆ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

**XX XX XX**

**KARNATAKA LEGISLATIVE ASSEMBLY**

**FIFTEENTH LEGISLATIVE ASSEMBLY**

**FIFTEENTH SESSION**

# THE KARNATAKA TAX ON PROFESSION, TRADES, CALLINGS AND EMPLOYMENTS (AMENDMENT) BILL, 2023

## (LA Bill No. 06 of 2023)

A Bill further to amend the Karnataka Tax on Profession, Trades, Callings and Employments Act, 1976.

Whereas, it is expedient to amend the Karnataka Tax on Profession, Trades, Callings and Employments Act, 1976 (Karnataka Act 35 of 1976), for the purposes hereinafter appearing;

Be it enacted by Karnataka State Legislature in the Seventy-fourth year of the Republic of India as follows.-

**1. Short title and commencement**.- (1) This Act may be called the Karnataka Tax on Profession, Trades, Callings and Employments (Amendment) Act, 2023.

(2) Save as otherwise provided, the provisions of this Act shall come into force with effect from the 1st day of April, 2023.

**2. Amendment of section 2**.-In the Karnataka Tax on Profession, Trades, Callings and Employments Act, 1976 (Karnataka Act 35 of 1976) (hereinafter referred to as the Principal Act), in section 2,-

(i) after clause (a), the following clauses shall be inserted, namely:-

“(aa) “agent” means a person who acts on behalf of another person in the course or furtherance of business;

(ab) “assessment” for the purposes of this Act, means determination of tax liability under this Act and includes self-assessment, reassessment and best judgment assessment;”; and

(ii) in clause (h), in the explanation after the words “Every branch of a”, the words and punctuation mark “proprietary concern”, shall be inserted.

**3. Amendment of section 9**.- In section 9 of the Principal Act, in sub-section (2), for the words “not exceeding one and half times”, the words “equal to one hundred per cent of” shall be substituted.

**4. Amendment of section 10**.-In section 10 of the Principal Act, in sub-section (6), for the figure and symbol “2%”, the words “one and a half per cent”, shall be substituted.

**5. Amendment of section 11**.-In section 11 of the Principal Act, in sub-section (2), for the words “one and a quarter per cent”, the words “one and a half per cent”, shall be substituted.

**6. Amendment of section 12**.-In section 12 of the Principal Act,-

(i) the words and punctuation mark “, without reasonable cause”, shall be omitted; and

(ii) for the words “not exceeding fifty percent”, the words “equal to ten percent”, shall be substituted.

**7. Substitution of Schedule**.- For Schedule of the Principal Act and the Explanations I to V thereunder, the following Schedule and Explanations shall be substituted, namely:-

**“SCHEDULE**
**[See section 3(2)]**
**Rates of tax on professions, trades, callings and employments**

| **Sl. No.** | **Class of Persons** | **Rate of tax** |
|---|---|---|
| (1) | (2) | (3) |
| 1 | Salary or wage earners whose salary or wage or both, as the case may be, for a month is Rs. 25,000-00 and above | Rs. 200-00 per month |
| 2 | Persons registered or liable to be registered under the Karnataka Goods and Services Tax Act, 2017 | Rs. 2,500-00 per annum |
| 3 | Self-employed persons engaged in Professions, Trades, Callings and Employments, with a standing in profession for more than 2 years, including Legal practitioners, Consultants, Agents, Chartered Accountants and Actuaries, Engineers, Health care professionals, Estate Agents or Brokers, Beauty parlours, dry cleaners and interior decorators, Journalists and Advertisement agencies, providing entertainment using Dish Antenna Cable TV, Computer Institutes selling time, Computer Training Institutes / Driving Institutes / Technical Training Institutes, Astrologers, Astropalmists, Numerologists, Vaastu consultants and Faith healers. | Rs. 2,500-00 per annum |
| 4 | Horse owners and the trainers, Jockeys, Directors, Actors and Actresses (Excluding Junior Artists), Owners of Oil Pumps and Service stations, gas stations, electric charging stations, Owners of Nursing homes, Hospitals, Diagnostic centres, Clinical laboratories and X-ray clinics, other than those run by the Central Government, State Government and local bodies, Owners of Gymnasium and Fitness centres. | Rs. 2,500-00 per annum |
| 5 | Educational Institutions and Tutorial Colleges or Institutes other than those run by the Central Government, State Government and local bodies. | Rs. 2,500-00 per annum |
| 6 | Employers of establishments defined under the Karnataka Shops and Commercial Establishments Act, 1961, employing more than five employees. | Rs. 2,500-00 per annum |
| 7 | Licensed dealers of liquors, Money lenders licensed under the Karnataka Money Lenders’ Act, 1961,Individuals or institutions conducting chit funds | Rs. 2,500-00 per annum |
| 8 | Owners of transport vehicles(other than auto rickshaws) run on their own or through others under permits granted under the Motor Vehicles Act, 1988 (Central Act 59 of 1988); Goods transport agencies (GTA) and Transport contractors including forwarding and clearing agents. | Rs. 2,500-00 per annum |

| | | |
|---|---|---|
| | **Explanation-** For the purposes of this entry Goods Transport Agency or GTA means any person who provides service in relation to transport of goods by road and issues consignment note, by whatever name called. | |
| 9 | Co-operative Societies registered under the Karnataka Co-operative Societies Act,1959 (Karnataka Act 11 of 1959) and engaged in any profession, trade or calling. | Rs. 2,500-00 per annum |
| 10 | Companies registered under the Companies Act, 2013 (Central Act 18 of 2013) and engaged in any profession, trade or calling; Banking companies as defined in the Banking Regulations Act, 1949 (Central Act 10 of 1949) **Explanation.-** For the purpose of this entry, 'banking companies' shall include any bank whose operations are governed by the provisions of the Banking Regulation Act,1949 (Central Act 10 of 1949) | Rs. 2,500-00 per annum |
| 11 | Persons other than those mentioned in any of the preceding entries who are engaged in any profession, trade, calling or employment and who are paying tax under the Income Tax Act, 1961 (Central Act 43 of 1961) | Rs. 2,500-00 per annum |
| 12 | Persons other than those mentioned in any of the preceding entries who are engaged in any profession, trade, calling or employment with a minimum of two years of standing and who are not exempted by Notification issued by the State Government from time to time. | Rs. 2,500-00 per annum |

**Explanation I.–** Notwithstanding anything in this Schedule, where a person is covered by more than one entry in the Schedule, tax is payable under any one of such entries.

**Explanation II.**– For the purposes of determining the liability of tax, in terms of Serial No. 4 in this Schedule, the higher number of workers and / or employees at any time during the year shall be reckoned as the basis.

**Explanation III.**– For the purposes of this Schedule where any asset or business is held on lease by a lessee, such lessee shall be deemed to be the person liable under the Act.

**Explanation IV.**– No tax shall be levied under this Act on any partner of a firm which is engaged in any profession, trade or calling if the tax is paid by such firm.

**Explanation V.**– Notwithstanding anything contained in the Schedule, every additional place of a person enumerated in any item of the Schedule shall be deemed to be a separate person for the purpose of levy of Profession tax specified in the Schedule and nothing in this explanation shall be applicable in case of additional places of business which are exclusively used as godown for storing goods."

## STATEMENT OF OBJECTS AND REASONS

The Karnataka Tax on Profession, Trades, Callings and Employments Act, 1976 was enacted to make a provision for the levy and collection of tax on Professions, Trades, Callings and Employments by the Government of Karnataka.

However, after implementing the GST Act, certain difficulties were faced. In order to overcome the difficulties, it is proposed to amend the Karnataka Tax on Profession, Trades, Callings and Employments Act, 1976 (Karnataka Act No. 35 of 1976).

In the Budget speech for the year 2023-2024, in para 443, it is proposed the Karnataka Tax on Profession, Trades, Callings and Employments (Amendment) Bill, 2023, inter alia, provides for the following, namely:-

(1) to insert new clause (aa) after clause (a) in section 2, so as to provide for a definition for the term “agent” to mean a person acting on behalf of another person in the course or furtherance of business.

It further seeks to insert new clause (ab) after clause (aa) in section 2, so as to provide for a definition for the term “assessment” for the purposes of this Act, to mean determination of tax liability under this Act and includes self-assessment, reassessment and best judgment assessment.

It further seeks to amend clause (h)in section 2, in the explanation to also include a proprietary concern to be deemed person to remove ambiguity in levying tax in case of a proprietary concern.

(2) Seeks to amend sub-section (2) of section 9,so as to reduce penalty where the escape from the assessment was due to wilful non-disclosure of information or attempt at evading the tax by the employer or the person from one and a half time the tax to equal to one hundred percent of the tax in line with GST Act.

(3) Seeks to amend sub-section (6) of section 10, so as to reduce interest rate where default is committed in payment of tax so deducted by a person making deduction from two percent per month to one and a half percent per month in line with the GST Act.

(4) Seeks to amend sub-section (2) of section 11 so as to increase the interest rate where any employer fails to deduct the tax at the time of payment of the salary or wage, or after deducting fails to pay the tax from one and a quarter percent per month to one and a half percent per month in line with the GST Act.

(5) Seeks to amend section 12 so as to reduce the penalty for non-payment of tax by a registered employer within the required time from an amount not exceeding fifty percent to a fixed amount of ten percent whether or not a reasonable cause is present.

(6) To substitute the Schedule to suit the present circumstances in the light of implementation of GST and also to rationalise the tax payable. Further the explanations are also substituted to remove ambiguity.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**Basavaraj Bommai**
Chief Minister

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE KARNATAKA TAX ON PROFESSION, TRADES, CALLINGS AND EMPLOYMENT ACT, 1976 (KARNATAKA ACT 35 OF 1976)

**XX XX XX**

2. Definitions.- In this Act, unless the context otherwise requires,-

**XX XX XX**

(h) "person" means any person who is engaged in any profession, trade, calling or employment in the State of Karnataka and includes a Hindu Undivided Family, firm, company, corporation or other corporate body, any society, club or association, so engaged but does not include any person who earns wages on a casual basis;

Explanation.- Every branch of a firm, company, corporation or other corporate body, any society, club or association shall be deemed to be a person.

**XX XX XX**

9. Assessment of escaped tax.-

**XX XX XX**

(2) In making an assessment under sub-section (1), the assessing authority, if it is satisfied that the escape from assessment was due to willful non-disclosure of information or attempt at evading the tax by the employer or the person direct such employer or the person to pay, in addition to the tax assessed under sub-section (1), a penalty not exceeding one and half times the tax so assessed:

Provided that no penalty under this sub-section shall be imposed unless the employer or the person affected has had a reasonable opportunity of showing cause against such imposition.

10. Payment of Tax and filing of return by enrolled persons and deduction of tax in the case of certain enrolled persons.-

**XX XX XX**

(6) If default is committed in the payment of tax deducted beyond ten days after the period specified under sub-section (5), such person shall be liable to pay interest at 2% of the amount of tax due for each month or part thereof for a period for which the tax remains unpaid.

**XX XX XX**

11. Consequences of failure to deduct or to pay tax.-

**XX XX XX**

(2) Without prejudice to the provisions of sub-section (1) if an employer referred to in sub-section (1) does not deduct the tax at the time of payment of the salary or wage, or after deducting fails to pay the tax as required by or under this Act, he shall be liable to pay simple interest at one and a quarter per cent of the amount of the tax due for each month or part thereof for the period for which the tax remains unpaid.

**XX** **XX** **XX**

12. Penalty for non-payment of tax.- If an enrolled person or a registered employer fails, without reasonable cause, to make payment of any amount of tax within the required time or date as specified in the notice of demand the assessing authority may, after giving him a reasonable opportunity of making representation, impose upon him a penalty not exceeding fifty per cent of the amount of tax due. This penalty shall be in addition to the interest payable under sub-section (2) or (3) of section 11.

**XX** **XX** **XX**

[SCHEDULE]
[See Section 3(2)]

| Sl. No. | Class of persons | Rate of tax |
|---|---|---|
| 1. | Salary or wage earners whose salary or wage or both, as the case may be, for a month is,-<br><br>(a) 1[ (X X X)] 1<br>(b) 2 [(X X X)] 2<br>(c) 2 [(X X X)] 2<br>(d) 3 [(X X X)] 3<br><br>(e) Rs.15,000 and above | 1[(X X X)] 1<br>2 [(X X X)] 2<br>2 [(X X X)] 2<br>3 [(X X X)] 3<br><br>Rs.200 per month |
| 2. | Legal practitioners including Solicitors and Notaries Public:-<br><br>(a) in the Bangalore Urban Agglomeration where standing in the profession is-<br><br>(i) less than 10 years<br>(ii) 10 years or more but less than 20 years<br>(iii) 20 years or more<br>(b) in any other area in the State is-<br>(i) less than 10 years<br>(ii) 10 years or more but less than 20 years<br>(iii) 20 years or more | Nil<br><br>Rs.1500 per annum<br>Rs.2500 per annum<br><br>Nil<br>Rs.1000 per annum<br><br>Rs.1500 per annum] |

| | | |
|---|---|---|
| 3. | Technical and Professional Consultants other than those mentioned elsewhere in the Schedule but including plumbing and Tax consultants:-<br>(a) in the Bangalore Urban Agglomeration where standing in the profession is-<br><br>(i) less than 2 years<br>(ii) 2 years or more but less than 5 years<br>(iii) 5 years or more but less than 10 years<br>(iv) 10 years or more<br><br>(b) in any other area in the State is-<br>(i) less than 2 years<br>(ii) 2 years or more but less than 10 years<br>(iii) 10 years or more | Nil<br>Rs.1000 per annum<br>Rs.1500 per annum<br>Rs.2500 per annum<br><br>Nil<br>Rs.1000 per annum<br>Rs.1500 per annum |
| 4. | (i) Chief Agents, Principal Agents, Special Agents, Insurance Agents and Surveyors or Loss Assessors registered or licensed under the Insurance Act, 1938 (Central Act IV of 1938) whose annual income is not less than [Rs.1,20,000] | Rs.1500 per annum |
| | (ii) Pigmy Agents or UTI Agents whose annual income is not less than [Rs.1,20,000]<br>Explanation: For the purpose of this item income shall be deemed to be the commission or any other remuneration by whatever name called, earned by the person as such Chief Agent, Principal Agent, Special Agent, Insurance Agent, Survey or Loss Assessor or Pigmy Agents or UTI Agents. | Rs. 1000 per annum |
| 5. | Chartered Accountants and Actuaries where the standing in the profession is,-<br>(i) Less than 2 years<br>(ii) Not less than 2 years but less than 5 years<br>(iii) 5 years or more | Nil<br>Rs.1000 per annum<br>Rs.2500 per annum |
| 6. | Medical Practitioners, including Medical Consultants (other than practitioners of Ayurvedic, Homeopathic and Unani Systems of medicines), Dentists, Radiologists, Pathologists and persons engaged in other similar professions or callings of a para-medical nature:- | |

| | | |
|---|---|---|
| | (a) in the Bangalore Urban Agglomeration where standing in the profession is-<br><br>(i) Less than 2 years<br>(ii) 2 years or more but less than 5 years<br>(iii) 5 years or more<br><br>(b) in any other area in the State-<br><br>(i) Less than 2 years<br>(ii) 2 years or more but less than 5 years<br>(iii) 5 years or more but less than 10 years<br>(iv) 10 years or more | Nil<br>Rs.1000 per annum<br>Rs.2500 per annum<br><br><br><br><br><br>Nil<br>Rs.1000 per annum<br>Rs.1500 per annum<br>Rs.2500 per annum |
| 7. | Engineers, RCC Consultants, Architects and Management Consultants-<br>(a) in the Bangalore Urban Agglomeration where standing in the profession is-<br>(i) Less than 2 years<br>(ii) 2 years or more but less than 5 years<br>(iii) 5 years or more<br><br>(b) in any other area in the State-<br>(i) Less than 2 years<br>(ii) 2 years or more but less than 10 years<br>(iii) 10 years or more | Nil<br>Rs.1000 per annum<br>Rs.2500 per annum<br><br>Nil<br>Rs.1000 per annum<br>Rs.1500 per annum |
| 8. | Members of Stock-Exchanges recognized under the Security Contracts (Regulation) Act, 1956 | Rs.2500 per annum |
| 9. | Estate agents or brokers,<br>(i) in Bangalore Urban Agglomeration,<br>(ii) in any other area in the State<br>(a) Income tax payees<br><br>(b) Other than (a) above | Rs. 2500 per annum<br><br>Rs. 1500 per annum<br>Rs. 1000 per annum |
| 10. | Contractors executing works contract as defined under the Karnataka Goods and Services Tax Act, 2017 where the total consideration in relation to the supply of goods or services or both in a year is Rs. 20 lakhs and above. | Rs. 2500 per annum] |
| 11. | (i) Race horse owners and trainers licensed by the turf clubs.<br>(ii) Jockeys licensed by the turf clubs / race clubs-<br>(a) in case of Apprentice Jockeys<br><br>(b) other than (a) above | Rs. 2500 per annum<br><br><br>Rs. 1000 per annum<br>Rs. 2500 per annum<br>Rs. 2500 per annum |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | | |
|---|---|---|
| | (iii) Bookmakers licensed by turf clubs | |
| 12. | Self-employed persons in the motion picture industries as follows:<br>(a) Directors, Actors and Actresses (excluding Junior Artists), Playback Singers, recordists, editors<br>(i) Income tax payees<br><br>(ii) other than (i) above<br><br>(b) Cameramen and still photographers | <br><br><br><br>Rs. 2500 per annum<br><br>Rs. 1500 per annum<br><br>Rs. 900 per annum |

**XX XX XX**

Explanation I. - Notwithstanding anything in this Schedule, where a person is covered by more than one entry in the Schedule the highest rate of tax specified under any of those entries shall be applicable in his case.

Explanation II.- For purposes of determining the liability and the rate of tax in terms of Serial Number 15 in this Schedule, the higher number of workers and / or employees and / or employees at any time during the year shall be reckoned as the basis.

Explanation III.- For the purposes of Serial No. 16 of this Schedule where the oil pump or service station is held on lease by a lessee, such lessee shall be deemed to be the person liable under the Act.

Explanation IV.- No tax shall be levied under this Act on any firm except when it is engaged in any profession, trade or calling specified in Serial Numbers 2 (a) (iii), 3 (a) (iv), 5 (iii), 6 (a) (iii), 6 (b) (iv), 7 (a) (iii), 8, 8 (i), 10(iv), 11 (i), 11 (ii) (b), 11 (iii), 13 (d), 15 (iv), 16, 17, 18 (ii), 19 (i), (b), 21, 22, 27(b), 29 (a), 29 (b) (i), 31, 32(b), 34, 37, 40, 41(a), 42, 43, 44, 45, 46(d), 47, 49(b), 51(a),52,53,54,55,56,60,61,62, 64,66,69(i),70(i),71(i),72(i) and 73 of the Schedule.

Explanation V. - No tax shall be levied under this Act on any partner of a firm, which is engaged in any profession, trade or calling specified in Explanation IV above.

**XX XX XX**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE Digitally signed by SUNIL GARDE Date: 2023.02.27 17:33:24 +05'30'